


ವೆಸ್ಟ್ ಇಂಡೀಸ್‌ನ ಬ್ಯಾಟಿಂಗ್ ಹೀರೊ ಆಂಡ್ರೆ ರಸೆಲ್

ತಮೀಮ್ ಇಕ್ಬಾಲ್ ಬ್ಯಾಟಿಂಗ್, ಮುಷ್ಫಿಕರ್ ರಹೀಮ್ ಬೌಲಿಂಗ್ ವಿಶ್ವದರ್ಜೆಯದು ಎನ್ನುವುದರಲ್ಲಿ ಅನುಮಾನವಿಲ್ಲ. ಶಕೀಬ್ ಅಲ್ ಹಸನ್ ಅನುಭವದ ಬೆನ್ನುಹುರಿ ಇದೆ. ಮೊಹಮ್ಮದುಲ್ಲಾ, ರುಬೆಲ್ ಹಸನ್ ತರಹದ ಮಾಗಿದ ಆಟಗಾರರ ಮೇಲೆ ಭರವಸೆಯ ನೋಟ ಬೀರುತ್ತಿರುವ ನಾಯಕ ಮುಷ್ರಫೆ ಮೊರ್ತಾಜಾ ಬದುಕಿನ ಕೊನೆಯ ವಿಶ್ವಕಪ್ ಇದಾಗಬಹುದು. 'ಯಾರೂ ನಾವು ಗೆಲ್ಲಬಹುದು ಎಂದು ಅಂದಾಜು ಮಾಡುವುದಿಲ್ಲ. ಹೀಗಾಗಿ ಕಳೆದುಕೊಳ್ಳುವುದು ಏನೂ ಇಲ್ಲ. ಪ್ರತಿ ಪಂದ್ಯವನ್ನೂ ಬೇರೆಯಾಗಿಯೇ ನೋಡುತ್ತಾ ಆಡಿಕೊಂಡು ಹೋಗುತ್ತೇವೆ' ಎನ್ನುವ ಮುಷ್ರಫೆ ಮೊರ್ತಾಜಾ ಮಾತಿನಲ್ಲಿ ಆತ್ಮವಿಶ್ವಾಸವಿದೆ.

ಅಫ್ಘಾನಿಸ್ತಾನದ ನಾಯಕ ಗುಲ್ಬದಿನ್ ನಬಿ ಅವರಿಗೆ ಇದುವರೆಗೆ ಒಮ್ಮೆಯೂ ತಮ್ಮ ತಂಡವನ್ನು ಮುನ್ನಡೆಸಿದ ಅನುಭವವಿಲ್ಲ. 38 ಟ್ವೆಂಟಿ20, 52 ಏಕದಿನ ಪಂದ್ಯಗಳನ್ನು ಆಡಿ ಪಳಗಿರುವ ಅವರ ನಾಯಕತ್ವವನ್ನು ಮೊಹಮ್ಮದ್ ನಬಿ ಹಾಗೂ ರಶೀದ್ ಖಾನ್ ತರಹದ ಅನುಭವಿಗಳೂ ಪ್ರಶ್ನಿಸಿದ್ದಾರೆ. ಅಸ್ಗರ್, ಅಫ್ಘನ್ ನಾಯಕತ್ವದಿಂದ ಇಳಿದರೂ 15 ಮಂದಿಯ ತಂಡದಲ್ಲಿ ಒಬ್ಬರಾಗಿದ್ದಾರೆ. ನೆಪಮಾತ್ರಕ್ಕೆ ಉಪಸ್ಥಿತಿ ಎಂದೆನಿಸಿಕೊಂಡಿರುವ ಈ ತಂಡದಲ್ಲೂ ಕೆಲವು ಮೊನಚು ಆಟಗಾರರನ್ನು ಕಾಣುವ ಅವಕಾಶ ಪ್ರೇಕ್ಷಕರಿಗೆ ಸಿಗಬಹುದು.

ಮನ್ನಣೆ ಪಡೆಯದ, ಸಾಮರ್ಥ್ಯ ಊಹಿಸಲಾಗದ ಆಟಗಾರರ ಪಡೆ ಎಂದು ನ್ಯೂಜಿಲೆಂಡ್ ತಂಡವನ್ನು ಕೆಲವರು ಬಣ್ಣಿಸುವುದಿದೆ. ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ, ಏಕದಿನದ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಈ ತಂಡವನ್ನು ಉಪೇಕ್ಷಿಸಲು ಸಾಧ್ಯವೇ ಇಲ್ಲ. 48.34ರ ಸರಾಸರಿಯಲ್ಲಿ 8026 ರನ್ ಗಳಿಸಿದ ಅನುಭವಿ ರಾಸ್ ಟೇಲರ್ ಎಂದು ಬೇಕಾದರೂ ಪುಟಿದೇಳಬಹುದು ಎಂಬ ಆತಂಕ ಎದುರಾಳಿಗಳಿಗೆ ಇದೆ. 2016ರಲ್ಲಿ ಎಡಗಣ್ಣಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಮೇಲೆ ಅವರ ದೃಷ್ಟಿ ಚುರುಕಾಗಿದೆ. ಕಳೆದ 12 ತಿಂಗಳಲ್ಲಿ 104.44ರ ಸರಾಸರಿಯಲ್ಲಿ ಅವರು ರನ್ ಗಳಿಸಿರುವುದೇ ಇದಕ್ಕೆ ಸಾಕ್ಷಿ. ಹನ್ನೊಂದು ಶತಕಗಳ ಗಡ್ಡಧಾರಿ ಸುಂದರ ಕೇನ್ ವಿಲಿಯಮ್ಸನ್, 16 ಶತಕಗಳ ಒಡೆಯ ಮಾರ್ಟಿನ್ ಗುಪ್ಟಿಲ್ ಬ್ಯಾಟಿಂಗ್ ಬಲವನ್ನು ಗಟ್ಟಿಗೊಳಿಸಬಲ್ಲರು. ಈ ಸಲ ಐಪಿಎಲ್‌ನಲ್ಲಿ ತಿಣುಕಾಡಿದ ಕೇನ್ ವಿಲಿಯಮ್ಸನ್ ಈ ತಂಡದ ನಾಯಕ. ಟ್ರೆಂಟ್ ಬೋಲ್ಟ್, ಟಿಮ್ ಸೌಥಿ ಅನುಭವದ ಬೌಲಿಂಗ್ ದಿಗ್ಗಜರ ಜತೆಗೆ ಗ್ರ್ಯಾಂಡ್ ಹೋಮ್, ಸ್ಯಾಂಟನರ್ ಅವರಂಥ ಆಲ್ ರೌಂಡರ್‌ಗಳ ಸಾಥ್ ಅವರ ಬೆನ್ನಿಗಿದೆ. ಕಳೆದ ಒಂದು ವರ್ಷದಲ್ಲಿ ಆರಂಭಿಕ ಜೋಡಿ ದೊಡ್ಡ ಜೊತೆಯಾಟ ಆಡಲು ಪರದಾಡಿರವುದು ತಂಡಕ್ಕೆ ತಲೆನೋವಾಗಿದೆ. ಬಾಂಗ್ಲಾದೇಶದ ಎದುರು ಇತ್ತೀಚೆಗೆ ಗುಪ್ಟಿಲ್ ಲಯ ಕಂಡುಕೊಂಡಿರುವ ಸಮಾಧಾನವೇ ಆ ನೋವಿಗೆ ಮುಲಾಮು ಎಂದು ವಿಲಿಯಮ್ಸನ್ ಭಾವಿಸಿದ್ದಾರೆ. ಅಚ್ಚರಿಗಳನ್ನು ಒಡ್ಡುವುದಕ್ಕೇ ಹೆಸರಾಗಿರುವ ಕಪ್ಪುವಸ್ತ್ರಧಾರಿಗಳ ಈ ತಂಡವನ್ನು ವಿಶ್ವಕಪ್‌ನಲ್ಲಿ ಉಪೇಕ್ಷಿಸುವ ಹಾಗಿಲ್ಲ.

'ಕಗಿಸೋ ರಬಾಡಾ, ಡೇಲ್ ಸ್ಟೇನ್, ಲುಂಗಿ ಗಿಡಿ, ಇಮ್ರಾನ್ ತಾಹಿರ್... ಈ ಬೌಲಿಂಗ್ ದಾಳಿ ಬಾಯಲ್ಲಿ ನೀರೂರಿಸುವಷ್ಟು ರುಚಿಕಟ್ಟಾಗಿದೆ' ಎಂದು ಕೆಲವರು ಹೇಳಿರುವುದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಕಳೆದ ಒಂದು ವರ್ಷದ ಅಂಕಿಅಂಶಗಳ ಮೇಲೆ ಕಣ್ಣಾಡಿಸಿದರೆ ಗೊತ್ತಾಗುತ್ತದೆ, ದಕ್ಷಿಣ ಆಫ್ರಿಕಾದ ಬೌಲರ್‌ಗಳ ಸಾಮರ್ಥ್ಯ ಏನು ಎಂದು. ಪ್ರತಿ 27.59 ರನ್‌ಗಳಿಗೆ ಒಂದರಂತೆ ವಿಕೆಟ್‌ಗಳನ್ನು ಕಿತ್ತಿರುವುದಷ್ಟೇ ಅಲ್ಲದೆ ಸತತವಾಗಿ ನಾಲ್ಕು ಏಕದಿನದ ಪಂದ್ಯಗಳ ಸರಣಿಗಳನ್ನು ಗೆದ್ದು ಬೀಗಿರುವ ತಂಡವಿದು.

ಬ್ಯಾಟಿಂಗ್‌ನಲ್ಲಿ ಹಷೀಮ್ ಆಮ್ಲಾ ಮೊದಲಿನ ಲಯದಲ್ಲಿ ಇಲ್ಲದೇ ಇರುವುದು ಈ ತಂಡಕ್ಕೆ ಕೊಂಚ ತಲೆಬಿಸಿ. ನಾಯಕ ಫ್ಲಾಪ್ ಡುಪ್ಲೆಸಿ ಒಂದು ವರ್ಷದಲ್ಲಿ 72 ಚಿಲ್ಲರೆ ಸರಾಸರಿಯಲ್ಲಿ ರನ್ ಗಳಿಸಿರುವುದು ಸಮಾಧಾನಕರ ಅಂಶ. ಕ್ವಿಂಟನ್ ಡಿ ಕಾಕ್ ಕೂಡ ಲಯಕ್ಕೆ ಮರಳಿದ್ದಾರೆ. ಎಬಿ ಡಿವಿಲಿಯರ್ಸ್ ನಿವೃತ್ತರಾಗಿರುವುದರಿಂದ ಮಧ್ಯಮ ಕ್ರಮಾಂಕ ಮೊದಲಿನಷ್ಟು ಗಟ್ಟಿಯಾಗಿಲ್ಲ. ಅಪಾಯಕಾರಿ ಬೌಲಿಂಗ್ ದಾಳಿ ನೆಚ್ಚಿಕೊಂಡೇ ಈ ತಂಡ ಇಂಗ್ಲೆಂಡ್‌ನ ಮೈದಾನಗಳಿಗೆ ಇಳಿಯುವುದರಲ್ಲಿ ಅನುಮಾನವಿಲ್ಲ.

ಮಧ್ಯಮ ಕ್ರಮಾಂಕದ ಅಡಿಯಲ್ಲಿನ ಬ್ಯಾಟ್ಸ್‌ಮನ್‌ಗಳೂ ಸ್ಫೋಟಕ ಇನಿಂಗ್ಸ್

ಮಧ್ಯಮ ಕ್ರಮಾಂಕದ ಅಡಿಯಲ್ಲಿನ ಬ್ಯಾಟ್ಸ್‌ಮನ್‌ಗಳೂ ಸ್ಫೋಟಕ ಇನಿಂಗ್ಸ್ ಕಟ್ಟಬಲ್ಲರೆನ್ನುವುದು ಇಂಗ್ಲೆಂಡ್ ತಂಡದ ಅಗ್ಗಳಿಕೆ. ಹೋದವರ್ಷದ ವಿಶ್ವಕಪ್ ನಂತರ 34 ಪಂದ್ಯಗಳಲ್ಲಿ ಈ ತಂಡ 300ಕ್ಕೂ ಹೆಚ್ಚು ರನ್‌ಗಳನ್ನು 50 ಓವರ್‌ಗಳಲ್ಲಿ ಗಳಿಸಿರುವ ಸಾಧನೆ ಮಾಡಿದೆ. ಇಂಥದೊಂದು ಶ್ರೇಯ ಈ ತಂಡಕ್ಕೆ ಮಾತ್ರ ಇರುವುದು.

